ಈಗಾಗಲೇ ಮಧ್ಯಮ ಪ್ರಮಾಣದ 51 ಕೈಗಾರಿಕೆಗಳಿಗೆ ರಾಜ್ಯ ಮಟ್ಟದ ಏಕ ಹವಾಕ್ಷಿ ಸಮಿತಿಯಿಂದ ಹಂಚಿಕೆಗೆ ಅನುಮೋದನೆಯಾಗಿರುತ್ತದೆ ಹಾಗೂ ಸಣ್ಣ ಪ್ರಮಾಣದ 19 ಕೈಗಾರಿಕೆಗಳಿಗೆ ಜಿಲ್ಲಾ ಮಟ್ಟದ ಹಂಚಿಕೆ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ. ಬಡಾವಣೆ ಕಾರ್ಯ ಪೂರ್ಣಗೊಂಡ ನಂತರ ಹಂಚಿಕೆ ಪತ್ರವನ್ನು ನೀಡಲಾಗುವುದು. ತದನಂತರ ಕೈಗಾರಿಕೆಗಳು ಬರಲಿವೆ.

ಇ) ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಯಾವುದೇ ದೊಡ್ಡ ಪ್ರಮಾಣದ ಕೈಗಾರಿಕೆಗಳು ಕುಡುಮಲಕುಂಟೆ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಕೋರಿ, ಬೇಡಿಕೆ ಸಲ್ಲಿಸಿಲ್ಲ.

ಜವಳಿ ಪಾರ್ಕ್

290 (704) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು):–(ಮಾನ್ಯ ಜವಳಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಗೌರಿಬಿದನೂರು ತಾಲ್ಲೂಕು ಕುಡಮಲಕುಂಟೆ ಪ್ರದೇಶದಲ್ಲಿ ಸರ್ಕಾರದ ಸುಮಾರು 750 ಎಕರೆ ಜಮೀನು ಭೂ ಸ್ವಾಧೀನಪಡಿಸಿಕೊಂಡಿರುವುದೇ

ಆ) ಹಾಗಿದ್ದಲ್ಲಿ, ಇದರಲ್ಲಿ ಜವಳಿ ಪಾರ್ಕ್ ಪ್ರಾರಂಭಿಸಲು ಯೋಜಿಸಲಾಗಿದೆಯೇ, ಯೋಜಿಸಿದ್ದಲ್ಲಿ, ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು):–

ಅ) ಹೌದು

ಆ) ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ

ನೇಕಾರರಿಗೆ ಮನೆ ಮಂಜೂರಾತಿ

292 (649) ಶ್ರೀ ಸಿದ್ದು ಸವದಿ (ತೇರದಾಳ):–(ವಿಧಾನ ಸಭೆ ಸದಸ್ಯರು) (ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ 2009–10 ಮತ್ತು 2010–11ನೇ ಸಾಲಿನಲ್ಲಿ ಬಡ ನೇಕಾರರಿಗೆ ಒದಗಿಸಿದ ಮನೆಗಳ ಸಂಖ್ಯೆ ಎಷ್ಟು?

ಆ) ತೇರದಾಳ ಮತ ಕ್ಷೇತ್ರದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಬಡ ಕೈಮಗ್ಗ

ನೇಕಾರರಿದ್ದು, ಹಿಂದೆ ಮಂಜೂರು ಮಾಡಿರುವ ಮನೆಗಳು ಸಾಕಾಗದೆ ಹೆಚ್ಚಿನ ಮನೆಗಳ ಬೇಡಿಕೆ ಇರುವುದರಿಂದ ಎಂದು ಮಂಜೂರು ಮಾಡಲಾಗುವುದು?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು):–

ಅ) 2009–10ನೇ ಸಾಲಿನಲ್ಲಿ 2500 ವಸತಿ ಕಾರ್ಯಗಾರಗಳನ್ನು ನೀಡಲಾಗಿದೆ. 2010–11ನೇ ಸಾಲಿನಲ್ಲಿ 1250 ವಸತಿ ಕಾರ್ಯಗಾರಗಳ ಗುರಿಯನ್ನು ನಿಗದಿಪಡಿಸಲಾಗಿದೆ.

ಆ) ಆಯವ್ಯಯದ ಲಭ್ಯತೆ ಹಾಗೂ ನೇಕಾರರ ಬೇಡಿಕೆಗೆ ಅನುಸಾರವಾಗಿ ಹೆಚ್ಚಿನ ಮನೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತದೆ.

ಬಾಂಡ್ ಪೇಪರ್‌ಗಳ ಅಭಾವ

293 (650) ಶ್ರೀ ಸಿದ್ದು ಸವದಿ (ತೇರದಾಳ್):–(ಕಂದಾಯ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಪ್ರಸ್ತುತ ಬಾಂಡ್ ಪೇಪರ್‌ಗಳನ್ನು ಯಾವ ನಿಯಮಾವಳಿಗಳ ಪ್ರಕಾರ ವಿತರಿಸಲಾಗುತ್ತಿದೆ;

ಆ) ಬಾಂಡ್ ಪೇಪರ್‌ಗಳ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಇ) ಬಾಂಡ್ ಪೇಪರ್‌ಗಳನ್ನು ಹೆಚ್ಚಿನ ಹಣ ತೆಗೆದುಕೊಂಡು ಮಾರಾಟ ಮಾಡುವವರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಈ) ಸ್ಥಳೀಯವಾಗಿ ಬಾಂಡ್ ಪೇಪರ್‌ಗಳು ಮೂಲ ಬೆಲೆಯಲ್ಲಿ ದೊರಕಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):–

ಅ) ರಾಜ್ಯದಲ್ಲಿ ಪ್ರಸ್ತುತ ಕರ್ನಾಟಕ ಮುದ್ರಾಂಕ (ಇ–ಸ್ಟ್ಯಾಂಪಿಂಗ್ ಮೂಲಕ ಮುದ್ರಾಂಕ ಶುಲ್ಕ ಪಾವತಿ) ನಿಯಮಗಳು 2009 ರನ್ವಯ ಬಾಂಡ್ ಪೇಪರ್‌ಗಳನ್ನು ವಿತರಿಸಲಾಗುತ್ತಿದೆ.

ಆ) ರಾಜ್ಯದಲ್ಲಿ 48 ಉಪ ನೋಂದಣಿ ಕಛೇರಿಗಳಲ್ಲಿ ಉಬ್ಬಚ್ಚು ಯಂತ್ರದ ಮೂಲಕ ಮುದ್ರಾಂಕ ಶುಲ್ಕ ದೃಢೀಕರಿಸಿ ಕೊಡಲಾಗುತ್ತಿದ್ದು, ಉಬ್ಬಚ್ಚು ಯಂತ್ರ ಲಭ್ಯವಿಲ್ಲದ ಉಪ ನೋಂದಣಿ ಕಛೇರಿಗಳಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ 1957 ಕಲಂ 10ಎ ಅನ್ವಯ ಮುದ್ರಾಂಕ ದೃಢೀಕರಿಸಿ ಕೊಡಲಾಗುತ್ತಿದೆ, ಇ–ಸ್ಟ್ಯಾಂಪಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದಿರುವುದರಿಂದ ರಾಜ್ಯದಲ್ಲಿ ಬಾಂಡ್ ಪೇಪರ್‌ಗಳ ಅಭಾವವು ಇರುವುದಿಲ್ಲ.

ಇ) ಇ–ಸ್ಟ್ಯಾಂಪಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದಿರುವುದರಿಂದ ಬಾಂಡ್ ಪೇಪರ್‌ಗಳನ್ನು ಹೆಚ್ಚಿನ ಹಣ ತೆಗೆದುಕೊಂಡು ಮಾರಾಟ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.